ಎ) ಮೇಲಿನಂತೆ 4 ರಬ್ಬರ್ ಕಂಪನಿಗಳು ಸರ್ಕಾರಕ್ಕೆ ಮಾರ್ಚ್ 2000ದವರೆಗೆ ಪಾವತಿಸಲು ಬಾಕಿ ಇದ್ದ ಗೇಣಿ ವಸೂಲು ಮಾಡಲು ಕ್ರಮ ಜರುಗಿಸಲಾಗಿ, ರಬ್ಬರ್ ಕಂಪನಿಗಳು ಈ ಕೆಳಗಿನಂತೆ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಿ ತಡೆಯಾಜ್ಞೆ ತಂದಿರುತ್ತಾರೆ. ಈ ರಿಟ್ ಅರ್ಜಿಗಳು ಇನ್ನೂ ಇತ್ಯರ್ಥವಾಗಿರುವುದಿಲ್ಲ.

ಕ್ರ. ಸಂ.	ರಬ್ಬರ್ ಕಂಪನಿಯ ಹೆಸರು	ರಿಟ್ ಅರ್ಜಿ ಸಂಖ್ಯೆ
1	ಮರ್ಕರಾ ರಬ್ಬರ್ ಲಿ.	29739/2000
2	ಕೊಚ್ಚಿನ್ ಮಲಬಾರ್ ಎಸ್ಟೇಟ್ ಅಂಡ್ ಇಂಡಸ್ಟ್ರೀಸ್ ಲಿ.	24363/2000
3	ನೀಲಂಬೂರ್ ರಬ್ಬರ್ ಕಂಪನಿ ಲಿ.	7943/2001
4	ಮೋರ್ಟ್‌ಲ್ಯಾಂಟ್ ರಬ್ಬರ್ ಕಂಪನಿ ಲಿ.	30020/2000

ಮರ್ಕೆರಾ ರಬ್ಬರ್ ಲಿಮಿಟೆಡ್ ರವರಿಗೆ ಏಪ್ರಿಲ್ 2000 ರಿಂದ 9/2004 ರವರೆಗಿನ ಗೇಣಿ ಬಾಕಿಯನ್ನು ಪಾವತಿಸುವಂತೆ ನೋಟಿಸ್ ನಿಡಲಾಗಿತ್ತು. ಇದರ ವಿರುದ್ಧ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ 35509 ಮತ್ತು 35510/2004 ನ್ನು ಸಲ್ಲಿಸಿರುತ್ತಾರೆ.

37(57) ಶ್ರೀ ಬೋಪಯ್ಯ ಕೆ.ಜಿ. (ಮಡಿಕೇರಿ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕೊಡಗು ಜಿಲ್ಲೆಯಲ್ಲಿ ಅಬಕಾರಿ ಇಲಾಖೆಗೆ ಸ್ವಂತ ಕಟ್ಟಡ ಕಟ್ಟಿಕೊಳ್ಳಲು ಈ ಹಿಂದೆ ಕ್ರಿಯಾ ಯೋಜನೆ ತಯಾರಿಸಿ ಮಂಜೂರಾತಿ ನೀಡಲಾಗಿದ್ದು, ಈ ಯೋಜನೆ ಯಾವ ಹಂತದಲ್ಲಿದೆ;

ಆ) ಸ್ಥಳ ಗುರುತಿಸುವ ಹಾಗೂ ಕಟ್ಟಡ ನಿರ್ಮಾಣದ ಕೆಲಸ ಎಂದಿನಿಂದ ಪ್ರಾರಂಭವಾಗುವುದು?

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು) :

ಅ) ಸರ್ಕಾರವು ಕೊಡಗು ಜಿಲ್ಲೆಯಲ್ಲಿ ಅಬಕಾರಿ ಇಲಾಖೆಯ ಕಚೇರಿಗಳಿಗಾಗಿ ಕಟ್ಟಡ ನಿರ್ಮಾಣ ಮಾಡಲು ಯಾವುದೇ ಕ್ರಿಯಾ ಯೋಜನೆಯನ್ನು ತಯಾರಿಸಿಲ್ಲ ಅಥವಾ ಮಂಜೂರು ಮಾಡಿಲ್ಲ.

ಆ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

38(61) ಶ್ರೀ ಬೋಪಯ್ಯ ಕೆ.ಜಿ. (ಮಡಿಕೇರಿ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕೊಡುಗು ಜಿಲ್ಲೆಯಲ್ಲಿ ಕಾಡಾನೆಗಳ ಹಾವಳಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಕಾಡಾನೆಗಳ ಹಾವಳಿಯನ್ನು ನಿಯಂತ್ರಿಸಲು ಸರ್ಕಾರ ಕೈಗೊಂಡ ಕ್ರಮ ಮತ್ತು ಯೋಜನೆಗಳೇನು;

ಇ) ಈ ಯೋಜನೆಗೆ ಎಷ್ಟು ಹಣ ಖರ್ಚು ಮಾಡಲಾಗಿದೆ;

ಈ) ಕಾಡಾನೆಗಳ ಹಾವಳಿಯಿಂದ ಎಷ್ಟು ನಷ್ಟ ಪರಿಹಾರವನ್ನು ಈವರೆಗೆ ರೈತರಿಗೆ ಕೊಡಲಾಗಿದೆ;

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಸಚಿವರು) :

ಅ) ಹೌದು ಬಂದಿದೆ.

ಆ) ಕಾಡಿನ ಅಂಚಿನ ಸುತ್ತಲೂ ಸೂಕ್ಷ್ಮ ಪ್ರದೇಶಗಳಲ್ಲಿ ಸೌರಶಕ್ತಿ ಬೇಲಿಗಳನ್ನು ನಿರ್ಮಿಸಲಾಗಿದೆ. ಆನೆತಡೆ ಕಂದಕವನ್ನು ತೋಡಲಾಗಿದೆ. ಆನೆ ಓಡಿಸುವ ತಂಡಗಳು ನಿರ್ಮಿಸಿ ಹಗಲು ರಾತ್ರಿ ಗಸ್ತು ಮಾಡುತ್ತ ಆನೆಗಳು ನಾಡಿಗೆ ಬರದಂತೆ ತಡೆಯೊಡ್ಡಲಾಗಿದೆ. ಕಾಡಿನಲ್ಲಿ ಕೆರೆಗಳನ್ನು ತೋಡಲಾಗಿದೆ. ಗಲ್ಲಿ ಚೆಕ್ ನಿರ್ಮಿಸಿ ಮಳೆನೀರು ನಿಲ್ಲುವಂತೆ ಮಾಡಲಾಗಿದೆ.

ಇ) ಕಾಡಾನೆ ಹಾವಳಿ ನಿಯಂತ್ರಿಸಲು ಕಳೆದ 3 ವರ್ಷಗಳಲ್ಲಿ ವಿವಿಧ ಯೋಜನೆಗಳಡಿಯಲ್ಲಿ ಖರ್ಚು ಮಾಡಿದ ವಿವರ ಈ ಕೆಳಗಿನಂತೆ ಇರುತ್ತದೆ.

ರೂ. ಲಕ್ಷಗಳಲ್ಲಿ

		2002–03	2003–04	2004–05 31–12–04 ರವರೆಗೆ
1	ಆನೆತಡೆ ನಿರ್ಮಾಣ			
	ಸೌರಶಕ್ತಿ ಬೇಲಿ ನಿರ್ಮಾಣ	5.35	34.18	–
	ಸೌರಶಕ್ತಿ ಬೇಲಿ ದುರಸ್ತಿ	2.00	2.49	–
	ಆನೆ ನಿರೋಧಕ ಕಂದಕ ನಿರ್ಮಾಣ	–	3.25	–
	ಆನೆ ನಿರೋಧಕ ಕಂದಕ ದುರಸ್ಥಿ	–	1.25	–
2	ಆನೆ ಓಡಿಸುವ ಕಾವಲುಗಾರ ನೇಮಕ/ನಿರ್ವಹಣೆ	2.87	4.92	4.44
	ಕಾಡಿನಲ್ಲಿ ಅಭಿವೃದ್ಧಿ ಕೆಲಸ ಕೆರೆ ಹೊಳೆತ್ತುವುದು/ಕೆರೆ ನಿರ್ಮಾಣ	–	–	19.88
3	ಗಲ್ಲಿ ಚೆಕ್ಸ್ ನಿರ್ಮಾಣ	0.25	–	1.00
	ಒಟ್ಟು	**10.47**	**46.09**	**25.32**

ಈ) ಕಾಡಾನೆಗಳ ಹಾವಳಿಯಿಂದ ಉಂಟಾದ ನಷ್ಟಕ್ಕೆ 2002–03ರಿಂದ 31–12–2004ರ ತನಕ ಈ ಕೆಳಗಿನಂತೆ ಪರಿಹಾರ ನೀಡಲಾಗಿದೆ.

ರೂ. ಲಕ್ಷಗಳಲ್ಲಿ

2002–03		2003–04		2004–05	
ಪ್ರಕರಣ ಸಂಖ್ಯೆ	ವಿತರಿಸಿದ ಪರಿಹಾರ	ಪ್ರಕರಣ ಸಂಖ್ಯೆ	ವಿತರಿಸಿದ ಪರಿಹಾರ	ಪ್ರಕರಣ ಸಂಖ್ಯೆ	ವಿತರಿಸಿದ ಪರಿಹಾರ
373	12.13	556	21.08	436	10.09